ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೯೮ (೨೩೬೩)

ಸದಸ್ಯರ ಹೆಸರು : ಶ್ರೀ ವೆಂಕಟಮುನಿಯಪ್ಪ ಬಿ.ಪಿ (ಬೇತಮಂಗಲ)

ಉತ್ತರಿಸುವವರು : ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ) ೨೦೦೫–೦೬ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿನ ವ್ಯಾಪ್ತಿಯ ಸಾಮಾಜಿಕ ಅರಣ್ಯ ವಲಯಕ್ಕೆ ಮಂಜೂರಾಗಿರುವ ಯೋಜನೆಗಳಾವುವು ;

ಆ) ಈ ಯೋಜನೆಗಳಿಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು ; (ಯೋಜನೆವಾರು ವಿವರ ನೀಡುವುದು) ;

ಇ) ಈ ಯೋಜನೆಗಳಲ್ಲಿ ಸರ್ಕಾರ ಎಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ ಹಾಗೂ ಈ ಯೋಜನೆಯಿಂದ ಸಂಬಂಧಿಸಿದವರಿಗೆ ಸಹಕಾರಿಯಾಗಿದೆಯೆಂಬುದನ್ನು ಸರ್ಕಾರ ಪರಿಶೀಲಿಸಿದೆಯೇ;

ಈ) ಈ ಯೋಜನೆಯ ಅನುಷ್ಠಾನದಲ್ಲಿ ಬಂಗಾರಪೇಟೆ ವಲಯ ಉಪ ಅರಣ್ಯಾಧಿಕಾರಿಗಳು ಅಸಡ್ಡೆ ತೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸದರಿ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ;

ಉತ್ತರ

ಅ) ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ಬಂಗಾರಪೇಟೆ ತಾಲ್ಲೂಕಿನ ವ್ಯಾಪ್ತಿಯ ಸಾಮಾಜಿಕ ಅರಣ್ಯ ವಲಯಕ್ಕೆ ೨೦೦೫–೦೬ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳು ಮಂಜೂರಾಗಿವೆ : –

೧. ಕೆ.ಎಸ್.ಎಫ್.ಎಂ.ಬಿ.ಸಿ
೨. ವನಸಂವರ್ಧನೆ
೩. ಎಸ್.ಜೆ.ಆರ್.ವೈ. ಜಿಲ್ಲ ಪಂಚಾಯತ್
೪. ಎಸ್.ಜೆ.ಆರ್.ವೈ. ತಾಲ್ಲೂಕು ಪಂಚಾಯತ್
೫. ಡಿ.ಪಿ.ಎ.ಪಿ (ಹೆರಿಯಂಲಿ) ಒನೇ ಹಂತ

ಆ) ಮೇಲ್ಕಂಡ ಯೋಜನೆಗಳಿಗೆ ಸರ್ಕಾರ ಬಿಡುಗಡೆ ಮಾಡಲಾಗಿರುವ ಹಣದ ವಿವರ ಈ ಕೆಳಕಂಡಂತಿದೆ.

ಯೋಜನೆ	ಬಿಡುಗಡೆ ಮಾಡಿದ ಹಣ (ರೂ. ಲಕ್ಷಗಳಲ್ಲಿ)
ಕೆ.ಎಸ್.ಎಫ್.ಎಂ.ಬಿ.ಸಿ ಯೋಜನೆ	೧.೨೬೦
ವನಸಂವರ್ಧನೆ ಯೋಜನೆ	೦.೪೪೧
ಎಸ್.ಜೆ.ಆರ್.ವೈ. ಜಿಲ್ಲಾ ಪಂಚಾಯತ್ ಯೋಜನೆ	೩,೦೦೦
ಎಸ್.ಜೆ.ಆರ್.ವೈ ತಾಲ್ಲೂಕು ಪಂಚಾಯತ್ ಯೋಜನೆ	೪,೫೦೦
ಡಿ.ಪಿ.ಎ.ಪಿ (ಹರಿಯಾಲಿ) ಒನೇ ಹಂತ ಯೋಜನೆ	೧೫೨೫
ಒಟ್ಟು	**೨೪,೪೫೧**

ಇ) ಮೇಲ್ಕಂಡ ಎಲ್ಲಾ ಯೋಜನೆಗಳು ಅನುಷ್ಠಾನಗೊಂಡಿದೆ ಹಾಗೂ ಈ ಯೋಜನೆಗಳಿಂದ ನೆಡುತೋಪು ಬೆಳೆಸಲು ಮತ್ತು ಸ್ಥಳೀಯ ಪರಿಸರಕ್ಕೆ ಸರಕಾರಿಯಾಗಿದೆ.

ಈ) ಮೇಲ್ಕಂಡ ಎಲ್ಲಾ ಯೋಜನೆಗಳ ಅನುಷ್ಠಾನದಲ್ಲಿ ಬಂಗಾರಪೇಟೆ ವಲಯ ಅರಣ್ಯಾಧಿಕಾರಿಗಳು ಯಾವುದೇ ಅಸಡ್ಡೆ ತೋರಿಸಿರುವುದಿಲ್ಲ ಹಾಗೂ ಅಸಡ್ಡೆ ತೋರಿಸಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೯೯ (೨೪೩೩)

ಸದಸ್ಯರ ಹೆಸರು : ಶ್ರೀ ವೆಂಕಟಮುನಿಯಪ್ಪ ಬಿ.ಪಿ (ಬೇತಮಂಗಲ)

ಉತ್ತರಿಸುವವರು : ಶ್ರೀ ಶಿವಾನಂದ. ಎನ್. ನಾಯ್ಡು

ಪ್ರಶ್ನೆ

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಕೈಗಾರಿಕಾ ವಿಸ್ತರಣಾಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಾವುವು ;

ಆ) ಕಳೆದ ೩ ವರ್ಷಗಳಿಂದ ಈ ಕಾರ್ಯಕ್ರಮಗಳಿಗೆ ಮಂಜೂರಾಗಿರುವ ಹಣವೆಷ್ಟು ಹಾಗೂ ಉಳಿದ ಹಣವೆಷ್ಟು (೨೦೦೪-೦೫ ಸಾಲಿನಿಂದ ೨೦೦೬-೦೭ನೇ ಸಾಲಿನವರೆಗೆ ಮಾಹಿತಿ ನೀಡುವುದು ;